ಕರ್ನಾಟಕ ಖನಿಜ ನೀತಿ - 2000ದ ಬಗ್ಗೆ

546 - ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರವು ಕರ್ನಾಟಕ ಖನಿಜ ನೀತಿ 2000 ಪ್ರಕಟಿಸಿದೆಯೇ?

ಆ) ಅರಣ್ಯ ಮತ್ತು ಅರಣ್ಯೇತರ ಪ್ರದೇಶಗಳಲ್ಲಿ ಗಣಿಗಾರಿಕೆ ಬಗ್ಗೆ ಈ ನೀತಿಯ ಪರಿಕಲ್ಪನೆ ಏನು?

ಇ) ಯಾವ ಯಾವ ಗಣಿಗಾರಿಕೆಗೆ ಆದ್ಯತೆ ನೀಡಲಾಗಿದೆ?

ಈ) ಪಶ್ಚಿಮ ಘಟ್ಟ ಅರಣ್ಯ ಪ್ರದೇಶದ ಗಣಿಗಾರಿಕೆ ಬಗ್ಗೆ ಸರ್ಕಾರ ಯಾವ ನಿರ್ಧಾರ ಕೈಗೊಂಡಿದೆ?

ಶ್ರೀ ವಿ. ಮುನಿಯಪ್ಪ (ಗಣಿ ಮತ್ತು ಭೂವಿಜ್ಞಾನ ಸಚಿವರು)

ಅ) ಹೌದು.

ಆ) ಮುಖ್ಯ ಖನಿಜಗಳಿಗೆ ಅರಣ್ಯ ಪ್ರದೇಶದಲ್ಲಿ ಗಣಿ ಗುತ್ತಿಗೆ ನೀಡುವ ಮೊದಲು ಅರಣ್ಯ ಸಂರಕ್ಷಣಾ ಕಾಯ್ದೆ,1980ರ ಸೆಕ್ಷನ್-2ರ ಪ್ರಕಾರ ಕೇಂದ್ರ ಸರ್ಕಾರದ ಪೂರ್ವಾನುಮತಿ ಪಡೆದು ನಂತರ ಗಣಿ ಗುತ್ತಿಗೆ ಮಂಜೂರು ಮಾಡಲಾಗುತ್ತದೆ. ಉಪ ಖನಿಜಗಳಿಗೆ ಅರಣ್ಯ ಪ್ರದೇಶಗಳಲ್ಲಿ ಸರ್ಕಾರದ ಸಂಸ್ಥೆಗಳಿಗೆ ಮಾತ್ರ ಅರಣ್ಯ ಸಂರಕ್ಷಣಾ ಕಾಯ್ದೆಯಡಿಯಲ್ಲಿ ಪೂರ್ವಾನುಮತಿ ಪಡೆದು ಕಲ್ಲುಗಣಿ ಗುತ್ತಿಗೆ ನೀಡಲು ಅವಕಾಶವಿರುತ್ತದೆ. ಅರಣ್ಯೇತರ ಪ್ರದೇಶಗಳಲ್ಲಿ ಮುಖ್ಯ ಖನಿಜಗಳಿಗೆ ಮಿನರಲ್ ಕನ್ಸೆಷನ್ ರೂಲ್ಸ್, 1960 ರಲ್ಲಿ ಸೂಚಿಸಿರುವಂತೆ ಹಾಗೂ ಉಪ ಖನಿಜಗಳಿಗೆ ಗ್ರಾನೈಟ್ ಕನ್ಸರ್ವೇಷನ್ ಡೆವಲಪ್‌ಮೆಂಟ್ ರೂಲ್ಸ್, 1999 ಮತ್ತು ಕರ್ನಾಟಕ ಉಪ ಖನಿಜ ರಿಯಾಯಿತಿ ನಿಯಮಾವಳಿ, 1994ರಂತೆ ಕಲ್ಲು ಗಣಿ ಗುತ್ತಿಗೆಗಳನ್ನು ಮಂಜೂರು ಮಾಡಲಾಗುವುದು.

ಇ) ರಾಜ್ಯದಲ್ಲಿ ಸಿಗುವ ಎಲ್ಲಾ ಖನಿಜಗಳಿಗೆ ಹಾಗೂ ಉಪ ಖನಿಜಗಳಿಗೆ ಆದ್ಯತೆ ನೀಡಲಾಗುವುದು.

ಈ) ಪಶ್ಚಿಮ ಘಟ್ಟದ ಅರಣ್ಯ ಪ್ರದೇಶದಲ್ಲಿ ಯಾವುದೇ ಗಣಿಗಾರಿಕೆ ಮಡುವ ಬಗ್ಗೆ ಆಸ್ಪದವಿರುವುದಿಲ್ಲ. ಹಾಗೂ ಈ ಪ್ರದೇಶದಲ್ಲಿ ಗಣಿಗಾರಿಕೆಯನ್ನು ನಿಷೇಧಿಸಲಾಗಿದೆ.

ಶ್ರೀ ಆರಗ ಜ್ಞಾನೇಂದ್ರ : ಸನ್ಮಾನ್ಯ ಅಧ್ಯಕ್ಷರೆ, ಸರ್ಕಾರವು ಕರ್ನಾಟಕ ಖನಿಜ ನೀತಿ 2000 ಪ್ರಕಟಿಸಿದೆಯೇ? ಎಂದು ಪ್ರಶ್ನೆ ಕೇಳಿರುವುದಕ್ಕೆ ಉತ್ತರವಾಗಿ 'ಹೌದು' ಎಂದಿದ್ದಾರೆ. ಸರ್ಕಾರವು ಕರ್ನಾಟಕ ಖನಿಜ ನೀತಿ 2000 ಇದನ್ನು ಯಾವಾಗ ಮುದ್ರಿಸಿ ಪ್ರಕಟಿಸಿದೆ? ಎಂಬುದನ್ನು ದಯವಿಟ್ಟು ತಿಳಿಸಬೇಕು. ಇದುವರೆವಿಗೂ ನಮಗ್ಯಾರಿಗೂ ಕೂಡ ಇದರ ಪ್ರತಿ ಸಿಕ್ಕಿರುವುದಿಲ್ಲ. ಆದುದರಿಂದ, ತಾವು ಕರ್ನಾಟಕ ಖನಿಜ ನೀತಿ 2000 ಇದನ್ನು ಸದನದಲ್ಲಿ ಮಂಡಿಸಿ ನಮಗೆಲ್ಲರಿಗೂ ಇದರ

ಪ್ರತಿಗಳು ಲಭ್ಯವಾಗುವುದಕ್ಕೆ ಕ್ರಮ ಕೈಗೊಳ್ಳಬೇಕೆಂದು ವಿನಂತಿಸುತ್ತೇನೆ. ಕರ್ನಾಟಕದ ಖನಿಜ ನೀತಿ ಏನೆಂಬುದು ರಾಜ್ಯದ ಜನತೆಗೆ ಗೊತ್ತಾಗಬೇಕು. ಎರಡನೆಯದಾಗಿ, ಪಶ್ಚಿಮ ಘಟ್ಟದಲ್ಲಿ ಆಟ್ಮಾಸ್ ಇಂಡಿಯಾ ಲಿಮಿಟೆಡ್ ಕಂಪನಿಯವರು ಚಿತ್ರದುರ್ಗ, ಶಿವಮೊಗ್ಗ ಮತ್ತು ತುಮಕೂರಿನಲ್ಲಿ ಚಿನ್ನದ ಮತ್ತು ವಜ್ರದ ಗಣಿಗಾರಿಕೆ ನಡೆಸಲು ಸಮೀಕ್ಷೆ ಮಾಡುವುದಕ್ಕೆ ಈಗಾಗಲೇ ಅರ್ಜಿ ಕೊಟ್ಟಿರುವುದು ಸರಿಯೇ? ಈ ದಿಸೆಯಲ್ಲಿ ಅವರಿಗೆ ಈಗಾಗಲೇ ಅನುಮತಿ ನೀಡಲಾಗಿದೆಯೇ? ರಾಜ್ಯದ ಶಿವಮೊಗ್ಗ ಮತ್ತು ಇತರ ಜಿಲ್ಲೆಗಳಲ್ಲಿ ಗಣಿಗಾರಿಕೆ ನಡೆಸುವುದಕ್ಕೋಸ್ಕರ ಈಗಾಗಲೇ ಸಮೀಕ್ಷಾ ಕಾರ್ಯ ಪ್ರಾರಂಭಿಸಿದ್ದಾರೆಯೇ? ಎಂಬುದನ್ನು ತಮ್ಮ ಮೂಲಕ ನಾನು ಮಾನ್ಯ ಕಾರ್ಯ ಪ್ರಾರಂಭಿಸಿದ್ದಾರೆಯೇ? ಎಂಬುದನ್ನು ತಮ್ಮ ಮೂಲಕ ನಾನು ಮಾನ್ಯ ಸಚಿವರನ್ನು ಕೇಳಬಯಸುತ್ತೇನೆ.

ಶ್ರೀ ವಿ. ಮುನಿಯಪ್ಪ : ಮಾನ್ಯ ಅಧ್ಯಕ್ಷರೆ, ಕರ್ನಾಟಕ ಖನಿಜ ನೀತಿ 2000 ಅನ್ನು ಪ್ರಕಟಿಸುವಾಗ ಸರ್ಕಾರ ಖನಿಜ ಉದ್ಯಮದಲ್ಲಿ ತೊಡಗಿರುವ ಎಲ್ಲಾ ಉದ್ದಿಮೆದಾರರ ಜೊತೆ ಕಳೆದ ಏಳೆಂಟು ತಿಂಗಳುಗಳ ಕಾಲ ಸಮಗ್ರವಾಗಿ ಸಮಾಲೋಚಿಸಿದ ಬಳಿಕವೇ ಸರ್ಕಾರ ಹೊಸ ಈ ನೀತಿಯನ್ನು ಪ್ರಕಟಿಸಿದೆ. ಈ ಹೊಸ ಖನಿಜ ನೀತಿ ತರುವುದರಲ್ಲಿ ಖನಿಜಕ್ಕೆ ಸಂಬಂಧಪಟ್ಟಂತೆ ಎಲ್ಲಾ ನ್ಯೂನತೆಗಳನ್ನು ಸರಿಪಡಿಸುವುದು ಮತ್ತು ಉದ್ದಿಮೆಯನ್ನು ಮತ್ತಷ್ಟು ಉತ್ತೇಜನಗೊಳಿಸುವಂಥ ಪ್ರಗತಿಪರವಾದ ನೀತಿ ಇದಾಗಿದೆ. ಕರ್ನಾಟಕ ಖನಿಜ ನೀತಿ 2000 ಇದರ ಬಿಡುಗಡೆ ಸಮಾರಂಭವನ್ನು ದಿನಾಂಕ : 13.9.2000ರಂದು ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಹಮ್ಮಿಕೊಂಡು ಉದ್ಘಾಟಿಸಲಾಗಿದೆ. ಸದರಿ ಸಮಾರಂಭದ ಆಹ್ವಾನ ಪತ್ರಿಕೆಗಳನ್ನು ನಾನು ಎಲ್ಲಾ ಮಾನ್ಯ ಶಾಸಕರುಗಳಿಗೂ ಕಳುಹಿಸಿಕೊಟ್ಟಿದ್ದು, ಸಮಾರಂಭದಲ್ಲಿ ಪಾಲ್ಗೊಂಡಿದ್ದವರೆಲ್ಲಾರಿಗೂ ಒಂದೊಂದು ಪ್ರತಿಯನ್ನು ಸಹ ಒದಗಿಸಿ ಕೊಟ್ಟಿರುತ್ತೇನೆ. ಕರ್ನಾಟಕ ಖನಿಜ ನೀತಿ 2000, ಇದರ ಪ್ರತಿಗಳು ಯಾವ ಮಾನ್ಯ ಶಾಸಕರುಗಳಿಗೆ ತಲುಪಿಲ್ಲವೋ ಅಂತಹವರಿಗೆ ಖಂಡಿತವಾಗಿಯೂ ಕಳುಹಿಸಿಕೊಡುವ ಕೆಲಸ ಮಾಡುತ್ತೇನೆ. ಎರಡನೆಯದಾಗಿ, ಪಶ್ಚಿಮ ಘಟ್ಟದ ಪ್ರದೇಶದಲ್ಲಿ ಗಣಿಗಾರಿಕೆಗಾಗಿ ಸಮೀಕ್ಷೆ ನಡೆಸುವುದಕ್ಕೆ ನಾವು ಅನುಮತಿ ಕೊಟ್ಟಿದ್ದೇವೆಂದು ಮಾನ್ಯ ಸದಸ್ಯರು ಏನು ಹೇಳಿದ್ದಾರೆ, ನಾವು ಯಾವುದೇ ಕಾರಣಕ್ಕೂ ಯಾರಿಗೂ ಈ ಉದ್ದೇಶಕ್ಕಾಗಿ ಅನುಮತಿ ಕೊಟ್ಟಿರುವುದಿಲ್ಲ. ಪಶ್ಚಿಮ ಘಟ್ಟದ ಅರಣ್ಯ ಪ್ರದೇಶವನ್ನು ಮಂಜೂರು ಮಾಡುವ ಬಗ್ಗೆ ಸರ್ಕಾರದ ಮುಂದೆ ಯಾವುದೇ ಪ್ರಸ್ತಾವವಿರುವುದಿಲ್ಲ. ಅರಣ್ಯ ಸಂರಕ್ಷಣಾ ಕಾಯ್ದೆ, 1980ರ ಪ್ರಕಾರ ಪಶ್ಚಿಮ ಘಟ್ಟದ ಅರಣ್ಯ ಪ್ರದೇಶದಲ್ಲಿ ಗಣಿಗಾರಿಕೆಗೆ ನಾವು ಯಾವುದೇ ರೀತಿಯಲ್ಲೂ ಅವಕಾಶ ಕೊಡುವುದಿಲ್ಲ.

ಶ್ರೀ ಅರಗ ಜ್ಞಾನೇಂದ್ರ : ಪಶ್ಚಿಮ ಘಟ್ಟದ ಕೆಲವು ಭಾಗಗಳಲ್ಲಿ ಸಣ್ಣ ಪ್ರಮಾಣದಲ್ಲಿ ಗಣಿಗಾರಿಕೆ ನಡೆಯುತ್ತಿರುವುದು ಈಗಾಗಲೇ ನಮ್ಮ ಗಮನಕ್ಕೆ ಬಂದಿದೆ. ರಸ್ತೆಗಳನ್ನು ದುರಸ್ತಿಗೊಳಿಸುವುದಕ್ಕೆ, ಇಲ್ಲವೇ ಕಲ್ಲನ್ನು ತೆಗೆಯುವುದಕ್ಕೆ ರೈತರು ಸಣ್ಣ ಪ್ರಮಾಣದಲ್ಲಿ ಕ್ವಾರಿ ಮಾಡುತ್ತಿದ್ದರೆ, ಸರ್ಕಾರ ಇವರ ಮೇಲೆಯೇ ತನ್ನ ಗಮನ ಕೇಂದ್ರೀಕರಿಸಿ ಇವರು ನಡೆಸುತ್ತಿರುವ ಗಣಿಗಾರಿಕೆಯನ್ನು ಅರಣ್ಯ ಇಲಾಖೆಯವರು ಮುಚ್ಚುವುದಕ್ಕೆ ಪ್ರಯತ್ನಿಸುತ್ತಿದ್ದಾರೆಯೇ ವಿನಾ ಪಶ್ಚಿಮ ಘಟ್ಟದಂಥ ನಿತ್ಯ ಹರಿದ್ವರ್ಣ ಕಾಡುಗಳಲ್ಲಿ ದೊಡ್ಡ ಪ್ರಮಾಣದಲ್ಲಿ ನಡೆಯುತ್ತಿರುವ ಗಣಿಗಾರಿಕೆಯನ್ನು ನಿಲ್ಲಿಸಿ ಕಾಡನ್ನು ರಕ್ಷಿಸುವುದಕ್ಕೆ ತಮ್ಮ

ಇಲಾಖೆಯು ಕ್ರಮ ಕೈಗೊಳ್ಳಬೇಕಾದ ಅಗತ್ಯವಿದೆ. ಗೃಹದ ಬಳಕೆಗಾಗಿ ರೈತರು ಸಣ್ಣಪುಟ್ಟ ಪ್ರಮಾಣದಲ್ಲಿ ಕಲ್ಲು ತೆಗೆಯುವ ಗಣಿಗಾರಿಕೆಗೆ ಇಲಾಖೆ ತಡೆಯೊಡ್ಡುವ ಅವಶ್ಯಕತೆ ಬರುವುದಿಲ್ಲ. ಆದುದರಿಂದ, ಈ ನಿಟ್ಟಿನಲ್ಲಿ ರೈತರಿಗೆ ಕಿರುಕುಳ ಕೊಡುವುದನ್ನು ನಿಮ್ಮ ಇಲಾಖೆ ತಡೆಗಟ್ಟಬೇಕಾಗುತ್ತದೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಪಶ್ಚಿಮ ಘಟ್ಟ ನಿತ್ಯ ಹರಿದ್ವರ್ಣ ಕಾಡಾಗಿದ್ದು, ಅಲ್ಲಿ ಅಪರೂಪದ ಪ್ರಾಣಿ-ಪಕ್ಷಿ ಸಂಕುಲಗಳಿದ್ದು, ಅನೇಕ ರೀತಿಯ ಗಿಡಮೂಲಿಕೆಗಳು, ಔಷಧೀಯ ಗುಣವುಳ್ಳ ಮರಗಳಿದ್ದು ಇದನ್ನು ರಕ್ಷಿಸ ಬೇಕಾಗಿರುತ್ತದೆ. ಇಡೀ ಪ್ರಪಂಚದಲ್ಲಿಯೇ ಪಶ್ಚಿಮ ಘಟ್ಟ ಅತ್ಯಂತ ಅಮೂಲ್ಯವಾದ ಪ್ರದೇಶವಾಗಿದೆ. ಅಲ್ಲದೆ, ಅತ್ಯಂತ ಸೂಕ್ಷ್ಮವಾಗಿರುವ ಪ್ರದೇಶ ಕೂಡ. ಅದು ಈಗಾಗಲೆ ಸಾಕಷ್ಟು ಒತ್ತುವರಿಯಾಗಿ ಗೊಂದಲ ನಿರ್ಮಾಣವಾಗಿದೆ. ಅದನ್ನು ನಿಲ್ಲಿಸಿ ಕಾಡನ್ನು ಉಳಿಸುವ ದೃಷ್ಟಿಯಿಂದ ಒಂದು ಸಮಗ್ರವಾದ ನೀತಿಯನ್ನು ಮಾಡಬೇಕು. ಕೊಡುವುದಿಲ್ಲವೆಂದರೆ ಕೊಡುವುದೇ ಇಲ್ಲ ಎಂದು ಮಾಡಬೇಕು. ಸಾಗರ ಮತ್ತು ತೀರ್ಥಹಳ್ಳಿ ತಾಲ್ಲೂಕುಗಳಲ್ಲಿ ವೈಮಾನಿಕ ಸಮೀಕ್ಷೆ ನಡೆಸಿರುವುದು ಸಾಮಾನ್ಯ ಜನರಿಗೂ ಗೊತ್ತಿದೆ. ಈಗಾಗಲೇ ಅಲ್ಲಿ ಸರ್ವೆ ಕೆಲಸ ನಡೆದಿದೆಯೇ? ನಡೆಯದಿದ್ದರೆ ಅಲ್ಲಿ ಯಾವ ಪ್ರಮಾಣಗಳು ಬರುತ್ತಿದೆ ಎಂಬ ಬಗ್ಗೆ ನಮಗೆ ಹೇಳಬೇಕು. ಪರಿಸರವಾದಿಗಳು, ಸಾಮಾನ್ಯ ಜನರು ಅದರ ವಿರುದ್ಧ ಹೋರಾಟ ಮಾಡುತ್ತಿದ್ದಾರೆ, ಮಾಧ್ಯಮಗಳಲ್ಲಿ ಸಹ ಬರುತ್ತಿದೆ, ಇದು ತಮಗೆ ಗೊತ್ತಾಗಲಿಲ್ಲವೆ? ಇದರಲ್ಲಿ ಯಾವುದೇ ವಿಚಾರವನ್ನು ಬಿಚ್ಚಿಡುವ ಅಗತ್ಯವಿಲ್ಲ.

ಶ್ರೀ ಪಿ. ಮುನಿಯಪ್ಪ : ಮಾನ್ಯ ಅಧ್ಯಕ್ಷರೆ, ಪಶ್ಚಿಮಘಟ್ಟ ಪ್ರದೇಶದಲ್ಲಿ ಯಾವುದೇ ಗಣಿಗಾರಿಕೆಗೆ ಅನುಮತಿ ಕೊಡಲು ಸಾಧ್ಯವೇ ಇಲ್ಲ. ಬಿಲ್ಡಿಂಗ್ ಮೆಟೀರಿಯಲ್ಸ್‌ಗಾಗಿ ಬೇರೆ ಬೇರೆ ಕಾರಣಕ್ಕಾಗಿ ಲೀಸಸ್ ಕೊಡಬೇಕೆಂದು ಕೇಳಿದ್ದಾರೆ. ಆದರೆ ಫಾರೆಸ್ಟ್ ಕನ್‌ಸರ್‌ವೇಷನ್ ಆಕ್ಟ್‌ನ ಪ್ರಕಾರ ಅರಣ್ಯ ಪ್ರದೇಶದಲ್ಲಿ ಅದಕ್ಕೆ ಅವಕಾಶ ಕೊಡಲು ಸಾಧ್ಯವಿಲ್ಲ. ಅರಣ್ಯೇತರ ಪ್ರದೇಶದಲ್ಲಿ ಎಲ್ಲೆಲ್ಲಿ ಅರ್ಜಿಗಳು ಬರುತ್ತದೆಯೋ ಅಲ್ಲಿ ಆದ್ಯತೆಯ ಮೇರೆಗೆ ಕೊಡಲು ಅವಕಾಶವಿದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, ನಾವೆಲ್ಲ ಪಶ್ಚಿಮಘಟ್ಟ ಭಾಗದಿಂದ ಬಂದಂಥವರು. ನನ್ನ ಕ್ಷೇತ್ರ ಪೂರ್ಣವಾಗಿ ಪಶ್ಚಿಮ ಘಟ್ಟದ ಭಾಗದಲ್ಲೇ ಇದೆ. ಪಶ್ಚಿಮ ಘಟ್ಟದಲ್ಲಿ ಗಣಿಗಾರಿಕೆ ನಡೆಯುತ್ತಿರುವ ಪ್ರದೇಶದಿಂದ ನಾನು ಪ್ರತಿನಿಧಿಸುವಂಥವನು. ಯಲ್ಲಾಪುರ ತಾಲ್ಲೂಕಿನಲ್ಲಿ ಬಿಸ್‌ಕೋಡ್ ಮುಂತಾದ ಪ್ರದೇಶವಿದೆ. ಅದನ್ನು ನಿಲ್ಲಿಸಲು ನಾವು ಸಾಕಷ್ಟು ವಿರೋಧ ಮಾಡಿ ಕೇಂದ್ರ ಸಚಿವರನ್ನೂ ಕರೆಸಿ ಸ್ಥಳದ ಪರಿಶೀಲನೆ ಮಾಡಿಸಿದೆವು. ಅಲ್ಲಿ ಈಗ ಯಾವುದೇ ಕಾರ್ಯಕ್ರಮ ನಡೆಯುತ್ತಿಲ್ಲ. ತಮ್ಮ ಇಲಾಖೆಗಿಂತ ಅರಣ್ಯ ಇಲಾಖೆಯವರ ಜವಾಬ್ದಾರಿ ಇದರಲ್ಲಿ ಹೆಚ್ಚಾಗಿದೆ. ಅರಣ್ಯ ಇಲಾಖೆಯ ಆರ್.ಎಫ್.ಓ ಗಳು ಡಿ.ಎಫ್.ಓ ಗಳು ಸಹ ಇದರ ಬಗ್ಗೆ ನಿದ್ದೆ ಮಾಡುತ್ತಿದ್ದಾರೆ.

ಅಧ್ಯಕ್ಷರು : ತಾವು ಗಣಿ ಇಲಾಖೆಯ ಬಗ್ಗೆ ಮಾತ್ರ ಮಾತನಾಡಿ. ತಾವು ಅರಣ್ಯದ ಬಗ್ಗೆ ಹೇಳಿದರೆ ಅವರೂ ಎದ್ದು ನಿಲ್ಲುತ್ತಾರೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಅದಕ್ಕೆ ಪೂರಕವಾಗಿ ಇದು ಬರುತ್ತದೆ. ಅರಣ್ಯ ಇಲಾಖೆಯ ಜವಾಬ್ದಾರಿ ಇದಕ್ಕೆ ಇಲ್ಲವೆ? ನಾನು ಗಣಿ ಇಲಾಖೆಯ ಬಗ್ಗೆ ಪ್ರಶ್ನೆ ಕೇಳಬೇಕೆಂದರೆ ಅರಣ್ಯ ಇಲಾಖೆಯನ್ನು ಉಲ್ಲೇಖ ಮಾಡದೆಯೇ ಕೇಳಲು ಆಗುವುದಿಲ್ಲ. ಅರಣ್ಯದ ಬಗ್ಗೆ ಹೇಳಬೇಡಿ ಎಂದರೆ ಹೇಗೆ ಆಗುತ್ತದೆ.

ಅಧ್ಯಕ್ಷರು : ವಿಚಾರ ಇರುವುದು ಗಣಿಗಾರಿಕೆಯ ಬಗ್ಗೆ, ಆದರೆ ತಾವು ಅರಣ್ಯ ಅಧಿಕಾರಿಗಳು ನಿದ್ರೆ ಮಾಡುತ್ತಿದ್ದಾರೆಂದು ಏಕೆ ಹೇಳಬೇಕು ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಹಾಗಿದ್ದರೆ ಅವರು ನಿದ್ರೆ ಹೋಗುತ್ತಿರುವುದು ಸುಳ್ಳೆ? ತಾವು ಅಧಿಕಾರಿಗಳನ್ನು ಏಕೆ ಬೆಂಬಲಿಸುತ್ತಿದ್ದೀರಿ? ಅಧಿಕಾರಿಗಳು ಗೊರಕೆ ಹೊಡೆಯುತ್ತಿದ್ದಾರೆ.

ಅಧ್ಯಕ್ಷರು : ಬೆಂಬಲಿಸುತ್ತಿಲ್ಲ, ತಾವು ಗಣಿಗಾರಿಕೆಯ ಬಗ್ಗೆ ಕೇಳುವುದಿದ್ದರೆ ಕೇಳಿ, ಇಲ್ಲದಿದ್ದರೆ ದಯಮಾಡಿ ಕುಳಿತುಕೊಳ್ಳಿ. ಬೇರೆ ವಿಚಾರದ ಬಗ್ಗೆ ಕೇಳುವುದಿದ್ದರೆ ಬೇರೆ ನೋಟೀಸ್ ಕೊಡಿ, ಬೇಕಾಗಿದ್ದರೆ ಅರ್ಧ ಗಂಟೆ ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, ಸಚಿವರು ಪಶ್ಚಿಮ ಘಟ್ಟದಲ್ಲಿ ಗಣಿಗಾರಿಕೆ ನಡೆಯುತ್ತಿಲ್ಲವೆಂದು ಹೇಳಿದ್ದಾರೆ. ಆದರೆ ಇವತ್ತಿನವರೆಗೆ ನನ್ನ ಕ್ಷೇತ್ರದಲ್ಲಿ ಗಣಿಗಾರಿಕೆ ನಡೆಯುತ್ತಿದೆ. ಗಣಿಗಾರಿಕೆ ನಡೆಯುತ್ತಿಲ್ಲವೆಂದು ಸದನಕ್ಕೆ ತಪ್ಪು ಮಾಹಿತಿಯನ್ನು ಅವರು ಕೊಡುತ್ತಿದ್ದಾರೆ. ಗಣಿಗಾರಿಕೆಗೆ ಪರವಾನಗಿಯನ್ನು ಕೊಟ್ಟಿಲ್ಲವೆಂದು ಇವರು ಹೇಳುತ್ತಾರೆ. ಆದರೆ ಅಲ್ಲಿ ಅವುಗಳು ಇಲ್ಲದೆ ಗಣಿಗಾರಿಕೆ ನಡೆಯುತ್ತಿದೆ. ಇದನ್ನು ಯಾವಾಗ ತಡೆಗಟ್ಟುತ್ತೀರಾ? ಇವರಿಗೆ ವರದಿ ಮಾಡಬೇಕಾಗಿರುವವರು ಅರಣ್ಯ ಇಲಾಖೆಯವರು. ಆದರೆ ಅವರು ವರದಿ ಮಾಡುವುದಿಲ್ಲ. ಇವರು, ಅವರು ಎಲ್ಲರೂ ಸೇರಿಕೊಂಡು ಗಣಿಗಾರಿಕೆಯನ್ನು ಅಲ್ಲಿ ಮಾಡುತ್ತಿದ್ದಾರೆ, ಆದ್ದರಿಂದ ಅಲ್ಲಿ ಪರಿಸರ ನಾಶವಾಗಿದೆ, ನಿತ್ಯಹರಿದ್ವರ್ಣ ಕಾಡುಗಳು ನಾಶವಾಗುತ್ತಿದೆ. ಆದ್ದರಿಂದ ಸೂಕ್ಷ್ಮವಾಗಿ ಪರಸ್ಪರ ಇಲಾಖೆಯವರು ಹೊಂದಾಣಿಕೆ ಮಾಡಿಕೊಂಡು ಅಲ್ಲಿ ಏನು ನಡೆಯುತ್ತಿದೆ ಎಂಬ ಬಗ್ಗೆ ವಿಶೇಷವಾದ ತನಿಖೆಯನ್ನು ಮಾಡಿಸಬೇಕು.

ಶ್ರೀ ವಿ. ಮುನಿಯಪ್ಪ : ಮಾನ್ಯ ಅಧ್ಯಕ್ಷರೆ, ಪಶ್ಚಿಮಘಟ್ಟ ಪ್ರದೇಶದಲ್ಲಿ ಗಣಿಗಾರಿಕೆಗೆ ಪರವಾನಗಿಯನ್ನು ಕೊಡಲು ಅವಕಾಶವಿಲ್ಲವೆಂದು ನಾನು ಈಗಾಗಲೇ ಹೇಳಿದ್ದೇನೆ. ಅಕ್ರಮವಾಗಿ ಗಣಿಗಾರಿಕೆ ನಡೆಯುತ್ತಿದೆ ಎಂಬ ಮಾತನ್ನು ಹೇಳಿದ್ದಾರೆ. ಅವರು ಎಲ್ಲೆಲ್ಲಿ ಗಣಿಗಾರಿಕೆಯಾಗುತ್ತಿದೆ ಎಂಬ ಬಗ್ಗೆ ನಿರ್ದಿಷ್ಟವಾಗಿ ಹೇಳಿ ದೂರು ಕೊಟ್ಟರೆ ಖಂಡಿತವಾಗಿ ನಿರ್ದಾಕ್ಷಿಣ್ಯವಾಗಿ ಕ್ರಮ ತೆಗೆದು ಕೊಳ್ಳುತ್ತೇನೆ.

ಶ್ರೀ ಎನ್. ಯೋಗೇಶ್‌ಭಟ್ : ಮಾನ್ಯ ಅಧ್ಯಕ್ಷರೆ, ಗಣಿಗಾರಿಕೆಯ ನೀತಿ ಮತ್ತು ಪರವಾನಗಿ ಕೊಡುವ ಬಗ್ಗೆ ಪೂರಕ ಪ್ರಶ್ನೆ ಕೇಳುತ್ತಿದ್ದೇನೆ. ಹೊಸ ಸರ್ಕಾರ ಬಂದಮೇಲೆ ಮಲೆಮಹದೇಶ್ವರ ಬೆಟ್ಟ ಮತ್ತು ಗಾಜನೂರು ಪ್ರದೇಶದಲ್ಲಿ ಹಲವು ವರ್ಷಗಳಿಂದ ಸ್ಥಗಿತವಾಗಿದ್ದ ಗಣಿಗಾರಿಕೆಗೆ ಅನುಮತಿ ಕೊಟ್ಟಿದ್ದು ನಿಜವೆ? ಡಾ|| ರಾಜಕುಮಾರ್ ಅಪಹರಣವಾದ ಮೇಲೆ ಗಣಿಗಾರಿಕೆಯನ್ನು ಸ್ಥಗಿತಗೊಳಿಸಿದ್ದು ನಿಜವೆ ?

ಶ್ರೀ ವಿ. ಮುನಿಯಪ್ಪ : ಮಾನ್ಯ ಅಧ್ಯಕ್ಷರೆ, ಅರಣ್ಯ ಪ್ರದೇಶದಲ್ಲಿ ಗಣಿಗಾರಿಕೆ ಮಾಡಲು ಅವಕಾಶವಿಲ್ಲ. ಅರಣ್ಯ ಇಲಾಖೆಯವರು ಅನುಮತಿಯನ್ನು ಕೊಟ್ಟರೆ ಮಾತ್ರ ನಾವು ಅನುಮತಿ

ನೀಡಲು ಕಾನೂನಿನಲ್ಲಿ ಅವಕಾಶವಿದೆ. ಮಲೆಮಹದೇಶ್ವರ ಅರಣ್ಯ ಪ್ರದೇಶದಲ್ಲಿ ನಾವು ಗಣಿಗಾರಿಕೆಗೆ ಅನುಮತಿ ನೀಡಲು ಹೋಗಿರಲಿಲ್ಲ. ವೀರಪ್ಪನ್‌ನ ಹಾವಳಿಯಿಂದ 1991-92ರಲ್ಲಿ ಗಣಿಗಾರಿಕೆಯನ್ನು ನಿಲ್ಲಿಸಲಾಗಿತ್ತು. ಇದರ ಬಗ್ಗೆ ಮರುಪರಿಶೀಲನೆ ಮಾಡಬೇಕೆಂದು ಬಹಳ ಕಾಲದಿಂದ ಒತ್ತಾಯವಿತ್ತು. ಕಳೆದ ಸರ್ಕಾರದಲ್ಲಿ ಇದ್ದ ಮಂತ್ರಿಗಳು ಈ ತಡೆಯನ್ನು ತೆರವು ಮಾಡಬೇಕು ಎಂದು ಒತ್ತಾಯ ಇತ್ತು. ಇದರ ಬಗ್ಗೆ ಆಗಿನ ಸರ್ಕಾರದಲ್ಲಿ ದಾಖಲೆಗಳು ಇತ್ತು. ಇದರ ಬಗ್ಗೆ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಅರಣ್ಯ, ಪೋಲೀಸ್, ಗಣಿ ಇಲಾಖೆಯ ಅಧಿಕಾರಿಗಳ ಸಭೆ ಮಾಡಿ ವರದಿ ನೀಡಲು ಮುಖ್ಯಮಂತ್ರಿಯವರು ಸೂಚನೆ ಕೊಟ್ಟಿದ್ದರು. ಅದರ ಪ್ರಕಾರ ಡಿ.ಜಿ.ಪಿ. ರವರು ಕೆಲವು ಕಂಡೀಷನ್ ಇಟ್ಟು ಅನುಮತಿ ಕೊಡಬಹುದು ಎಂದು ವರದಿ ನೀಡಿದ್ದರು. ಆದರೆ ಇತ್ತೀಚೆಗೆ ಡಾ||ರಾಜಕುಮಾರ್‌ರವರ ಅಪಹರಣವಾದ ಸುದ್ದಿ ಬಂದ ಕೂಡಲೆ ಗಣಿಗಾರಿಕೆಯನ್ನು ನಿಲ್ಲಿಸಿಬಿಟ್ಟಿದ್ದೇವೆ. ಆದರೆ 1991-92ರನಂತರ ನಾವು ಯಾರಿಗೂ ಅನುಮತಿಯನ್ನು ಕೊಟ್ಟಿರಲಿಲ್ಲ.

ಶ್ರೀ ಕೆ.ಹೆಚ್. ಹನುಮೇಗೌಡ : ಮಾನ್ಯ ಅಧ್ಯಕ್ಷರೆ, ಬಂಡೀಪುರ ಅಭಯಾರಣ್ಯದಲ್ಲಿ ಬಹಳ ಬೆಲೆಯುಳ್ಳ ಕಪ್ಪು ಗ್ರಾನೈಟ್ ಇದೆ. ಸಾಮಾನ್ಯವಾಗಿ ಅಲ್ಲಿ ಗಣಿಗಾರಿಕೆ ಮಾಡಲು ಅನುಮತಿ ಕೊಟ್ಟಿಲ್ಲ. ಆದರೆ ಒಬ್ಬ ಗುತ್ತಿಗೆದಾರ ಆ ಅಭಯಾರಣ್ಯದ ಪಕ್ಕದಲ್ಲಿ ಒಬ್ಬ ರೈತನ ಸ್ವಲ್ಪ ಜಮೀನನ್ನು ಗಣಿಗಾರಿಕೆಗೆಂದು ತೆಗೆದುಕೊಂಡ, ಆದರೆ ಆ ಭೂಮಿಯಲ್ಲಿ ಕಲ್ಲು ಇಲ್ಲ, ಆದರೆ ಅರಣ್ಯದ ಪಕ್ಕದಲ್ಲಿ ಇದ್ದ ಜಾಗದಲ್ಲಿ ಸುಮಾರು ನೂರು ಕೋಟಿ ರೂಪಾಯಿಗಳಿಗೂ ಮೇಲ್ಪಟ್ಟು ಕಪ್ಪು ಗ್ರಾನೈಟನ್ನು ನಾಲ್ಕು ವರ್ಷಗಳ ಕಾಲ ನಿರಂತರವಾಗಿ ದಕೋಡೆ ಮಾಡಿದ್ದಾನೆ. ಗಣಿ ಇಲಾಖೆ ಮತ್ತು ಅರಣ್ಯ ಇಲಾಖೆಯವರಿಗೆ ಏನು ಮಾಡಿದ್ದಾನೋ ಗೊತ್ತಿಲ್ಲ. ಇದು ಹೇಗೆ ಆಯಿತು?

ಶ್ರೀ ವಿ. ಮುನಿಯಪ್ಪ : ಇದರ ಬಗ್ಗೆ ತಕ್ಷಣದಲ್ಲಿ ಮಾಹಿತಿ ಇಲ್ಲ. ಖಂಡಿತವಾಗಿ ಮಾಹಿತಿ ತರಸಿ ಹೇಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೆ, ಮಾನ್ಯ ಗಣಿಗಾರಿಕೆ ಸಚಿವರು ಸರ್ಕಾರದ ನೀತಿಯನ್ನು ಪ್ರಕಟ ಮಾಡಿರುವುದರಿಂದ ಇಡೀ ರಾಜ್ಯಕ್ಕೆ ಇದು ಸಂಬಂಧಪಡುವುದರಿಂದ ಈ ಪ್ರಶ್ನೆಯನ್ನು ಕೇಳುತ್ತಿದ್ದೇನೆ. ಕೋಲಾರ ಜಿಲ್ಲೆಯಾದ ತಮ್ಮ ಕ್ಷೇತ್ರದಲ್ಲೂ ಸಹ ಇದು ಅನುಭವಕ್ಕೆ ಬಂದಿರಬಹುದು. ಇಡೀ ರಾಜ್ಯದ ಹೊಳೆಗಳಲ್ಲಿ ಮತ್ತು ನದಿಗಳಲ್ಲಿ ಸಿಗುವ ಮರಳನ್ನು ಎತ್ತಲು ಗ್ರಾಮಪಂಚಾಯಿತಿ, ಜಿಲ್ಲಾಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಪುರಸಭೆ, ಕೆಲವು ಸಂಘಸಂಸ್ಥೆಗಳು, ಗಣಿ ಮತ್ತು ಭೂವಿಜ್ಞಾನ ಇಲಾಖೆಯವರು, ಡೆಪ್ಯುಟಿ ಕಮೀಷನರ್, ತಹಶೀಲ್ದಾರರು ಈ ರೀತಿ ಬೇರೆ ಬೇರೆ ಏಜನ್ಸಿಯವರು ಪರವಾನಗಿಯನ್ನು ಕೊಡುತ್ತಿದ್ದಾರೆ ಕೆಲವರು ನ್ಯಾಯವಾಗಿ ಕೊಡುತ್ತಿದ್ದಾರೆ, ಕೆಲವರು ಅಕ್ರಮವಾಗಿ ಕೊಡುತ್ತಿದ್ದಾರೆ, ಈ ವರ್ಷ ಕಳೆದ ಇಪ್ಪತ್ತೈದು ವರ್ಷಗಳು ಆಗದೇ ಇರುವಷ್ಟು ಮಳೆ ಬಂತು, ಎಲ್ಲಾ ತೋಟಗಳು ಸಂಪೂರ್ಣವಾಗಿ ನಾಶವಾಗಿರುವುದನ್ನು ತಾವು ನೋಡಿದ್ದೀರಿ. ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿ ಕಟ್ಟಿರುವ ಸೇತುವೆಗಳು ಕುಸಿಯುವ ಮಟ್ಟಕ್ಕೆ ಹೋಗಿರುವುದು ನಮ್ಮ ಗಮನಕ್ಕೆ ಬಂದಿದೆ. ಆದ್ದರಿಂದ ಮರಳನ್ನು ಎತ್ತಲು ಗಣಿ ಇಲಾಖೆಯವರು ಅನುಮತಿಯನ್ನು

ಕೊಡತಕ್ಕ ಸಮಯದಲ್ಲಿ ಸ್ಪಿಕ್ಟ್ ಆಗಿ ಸರ್ಕಾರದ ಸ್ಟ್ರಕ್ಚರ್‌ಗಳೇನಿದೆ, ಸೇತುವೆಗಳಿಗೆ ಅಪಾಯವಾಗದ ರೀತಿಯಲ್ಲಿ ಏನಾದರೂ ಕ್ರಮವನ್ನು ತೆಗೆದುಕೊಳ್ಳಲು ಸಾಧ್ಯವಿದೆಯೇ ಎಂಬ ಬಗ್ಗೆ ಮಾನ್ಯ ಸಚಿವರಲ್ಲಿ ಕೇಳುತ್ತಿದ್ದೇನೆ.

ಶ್ರೀ ವಿ. ಮುನಿಯಪ್ಪ : ಮಾನ್ಯ ಅಧ್ಯಕ್ಷರೆ, ಮರಳಿನ ಅಕ್ರಮ ಸಾಗಾಣಿಕೆ ಒಂದು ದೊಡ್ಡ ದಂಧೆಯಾಗಿದೆ. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದತಕ್ಷಣ ಇದರ ಬಗ್ಗೆ ತೀವ್ರವಾಗಿ ಪರಿಶೀಲನೆ ಮಾಡಿದ್ದೇವೆ. ಮುಖ್ಯಮಂತ್ರಿಗಳ ಕ್ಷೇತ್ರವಾದ ಮದ್ದೂರಿನಲ್ಲಿ ಸಹ ಸೇತುವೆಯ ಹತ್ತಿರ ಹತ್ತು ಹದಿನೈದು ಅಡಿ ಮರಳನ್ನು ಎತ್ತಿರುವುದರಿಂದ ಸೇತುವೆಗೆ ಧಕ್ಕೆಯಾಗುತ್ತಿತ್ತು, ಇದರ ಜೊತೆಗೆ ಅಂತರ್ಜಲ ಮಟ್ಟವು ಕುಸಿಯುವ ಪ್ರಯತ್ನವಾಗುತ್ತಿತ್ತು. ಇದನ್ನು ತಡೆಗಟ್ಟಬೇಕೆಂದು ಪೋಲೀಸ್ ಇಲಾಖೆ ಮತ್ತು ಗಣಿ ಇಲಾಖೆಯಿಂದ ತೀವ್ರವಾದ ಕ್ರಮ ತೆಗೆದುಕೊಂಡಿದ್ದೇವೆ. ತಮಗೆ ಗೊತ್ತಿರುವಂತೆ ಕಳೆದ ಎರಡು ತಿಂಗಳ ಹಿಂದೆ ಸರ್ಕಾರದ ನೀತಿಯ ವಿರುದ್ಧವಾಗಿ ಲಾರಿಯವರೆಲ್ಲ ಧರಣಿ ಮಾಡಿದ್ದರು. ಆಗ ನಾವು ಅವರನ್ನೂ ಕರೆದು ಸಮಗ್ರವಾಗಿ ಚಿಂತನೆ ಮಾಡಬೇಕೆಂದು ಚರ್ಚೆ ಮಾಡಿ ಹೊಸ ನೀತಿಯನ್ನು ನಾವು ಈಗಾಗಲೆ ಪ್ರಕಟಣೆ ಮಾಡಿದ್ದೇವೆ. ತಮ್ಮ ಸರ್ಕಾರವಿದ್ದಾಗ ಗ್ರಾಮಪಂಚಾಯಿತಿಯವರಿಗೆ ಮರಳನ್ನು ಎತ್ತಲು ಅಧಿಕಾರ ನೀಡುವುದಕ್ಕೆ ಅವಕಾಶ ಕೊಟ್ಟಿದ್ದಿರಿ. ಗ್ರಾಮಪಂಚಾಯಿತಿಗಳು ಏನು ಕ್ರಮ ತೆಗೆದುಕೊಳ್ಳಬೇಕಾಗಿತ್ತೋ ಅದರಲ್ಲಿ ಸಂಪೂರ್ಣವಾಗಿ ವಿಫಲವಾದವು, ವ್ಯವಸ್ಥಿತವಾಗಿ ಲೈಸೆನ್ಸ್ ಕೊಡಿಸಿ ಸಕ್ರಮಗೊಳಿಸತಕ್ಕ ಕೆಲಸ ಮಾಡಲಿಲ್ಲ. ಆದ್ದರಿಂದ ಇವತ್ತು ಗ್ರಾಮ ಪಂಚಾಯಿತಿಗಳಿಗೆ ಕೊಟ್ಟಿರತಕ್ಕ ಅಧಿಕಾರವನ್ನು ಈಗ ಸರ್ಕಾರ ವಾಪಸ್ ತೆಗೆದುಕೊಂಡಿದೆ. ಸರ್ಕಾರ ಈಗ ಎಲ್ಲಾ ಅಸಿಸ್ಟೆಂಟ್ ಕಮೀಷನರ್‌ರವರ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ರಚಿಸಿದೆ. ಯಾರಾದರೂ ಒಬ್ಬ ಹಿರಿಯ ಅಧಿಕಾರಿ ಬೇಕಾಗಿದ್ದರಿಂದ ಅಸಿಸ್ಟೆಂಟ್ ಕಮಿಷನರ್‌ರವರನ್ನು ಅಧ್ಯಕ್ಷರನ್ನಾಗಿ ಮಾಡಿದ್ದೇವೆ. ಇದನ್ನು ಸಮಗ್ರವಾಗಿ ತಡೆಗಟ್ಟತಕ್ಕಂಥ ಕೆಲಸ ಬಹಳ ಕಷ್ಟಕರವಾದುದು. ಆ ಸಮಿತಿಯಲ್ಲಿ ತಾಲ್ಲೂಕು ಪಂಚಾಯಿತಿ ಕಾರ್ಯ ನಿರ್ವಾಹಣಾಧಿಕಾರಿ ಮತ್ತು ಗಣಿ ಇಲಾಖೆಯ ಜಿಯಾಲಜಿಸ್ಟ್ ಇರುತ್ತಾರೆ. .ಸಮಗ್ರವಾಗಿ ಪ್ರತಿಯೊಂದು ಕ್ಷೇತ್ರದಲ್ಲಿರತಕ್ಕಂಥ ಮರಳು ದಾಸ್ತಾನನ್ನು ಸಮೀಕ್ಷೆ ಮಾಡುತ್ತಿದ್ದೇವೆ. ಈಗಾಗಲೇ ಸಮೀಕ್ಷೆ ವರದಿ ಸರ್ಕಾರದಲ್ಲಿದೆ. ಅದರ ಆಧಾರದ ಮೇಲೆ ಎಲ್ಲೆಲ್ಲಿ ನಿರ್ಬಂಧ ಮಾಡಬೇಕೋ, ಎಲ್ಲೆಲ್ಲಿ ಮುಕ್ತವಾಗಿ ಸಾಗಿಸಲು ಅವರಿಗೆ ಪರವಾನಿಗೆ ಕೊಡಬೇಕು ಎಂಬುದರ ಬಗ್ಗೆ ನಿರ್ಣಯ ತೆಗೆದುಕೊಳ್ಳತಕ್ಕಂಥ ಜವಾಬ್ದಾರಿಯನ್ನು ಈ ಸಮಿತಿಗೆ ಕೊಟ್ಟಿದ್ದೇವೆ. ಹಾಗೆ ಅನುಮತಿ ಕೊಡತಕ್ಕ ಸಂದರ್ಭದಲ್ಲಿ ಮುಕ್ತವಾಗಿ ಹರಾಜು ಮುಖಾಂತರ ಕೊಡಬೇಕೆಂದು ಹೇಳಿದ್ದೇವೆ. ನಿರ್ಬಂಧಿತ ಪ್ರದೇಶದಲ್ಲಿ ಮರಳನ್ನು ಏನಾದರೂ ಸಾಗಿಸಿದರೆ ಪ್ರತಿ ಲಾರಿ ಮೇಲೆ 5-10 ಸಾವಿರ ರೂಪಾಯಿಗಳನ್ನು ದಂಡವಾಗಿ ವಿಧಿಸಬೇಕೆಂಬ ಹೊಸ ಕಾನೂನನ್ನು ಸಹ ಈಗಾಗಲೇ ನಾವು ತಂದಿದ್ದೇವೆ. ಎಲ್ಲಿ ಸಾರ್ವಜನಿಕರ ಆಸ್ತಿಗಳಿಗೆ ಧಕ್ಕೆ ಆಗುತ್ತದೋ ಅಂತಹ ಕಡೆಗಳಲೆಲ್ಲಾ ನಿರ್ಬಂಧಿತ ಪ್ರದೇಶವೆಂದು ನಾವು ಘೋಷಣೆ ಮಾಡುತ್ತಿದ್ದೇವೆ. ಅದರ ಬಗ್ಗೆ ಈಗಾಗಲೇ ಸಮೀಕ್ಷೆ ನಡೆಸಲಾಗಿದ್ದು ಅದರ ವರದಿ ಇಲಾಖೆ ಬಳಿ ಇದೆ. ಎಲ್ಲಿ ಮರಳನ್ನು ತೆಗೆಯಬೇಕು ಅಥವಾ ಮರಳನ್ನು ತೆಗೆಯದಂತೆ ನಿರ್ಬಂಧ ಮಾಡಬೇಕು ಎಂದು ನಿರ್ಣಯಿಸತಕ್ಕ ಅಧಿಕಾರವನ್ನು ಅಸಿಸ್ಟೆಂಟ್ ಕಮೀಷನರ್ ಅಧ್ಯಕ್ಷತೆಯ ಆ ಸಮಿತಿಗೇ ಕೊಟ್ಟಿದ್ದೇವೆ.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ : ಮಾನ್ಯ ಅಧ್ಯಕ್ಷರೇ, ಅರಣ್ಯ ಪ್ರದೇಶಗಳಲ್ಲಿ ಗಣಿಗಾರಿಕೆ ಇಲ್ಲವೆಂದು ಮಾನ್ಯ ಮಂತ್ರಿಗಳು ಈಗ ಹೇಳಿದರು. ಬನ್ನೇರುಘಟ್ಟ ಪ್ರದೇಶಗಳಲ್ಲಿ ನಾನು ಮಾನ್ಯ ಮುನಿಯಪ್ಪನವರನ್ನೇ ಕರೆದುಕೊಂಡು ಒಂದು ಸ್ಥಳಕ್ಕೆ ಹೋಗಿದ್ದೆ. ಆ ಸ್ಥಳಕ್ಕೆ ಭೇಟಿ ನೀಡಿದಾಗ ಮಾನ್ಯ ಸಚಿವರು ಅಲ್ಲಿ ಗಣಿಗಾರಿಕೆ ನಿಲ್ಲಿಸಲು ನೋಟೀಸ್ ಅನ್ನು ಕೊಡುವುದಾಗಿ ಹೇಳಿದರು. ಆದರೆ ಇದುವರೆಗೂ ಅಲ್ಲಿ ಗಣಿಗಾರಿಕೆ ನಡೆಯುತ್ತಲೇ ಇದೆ. ನೋಟೀಸ್ ಕಾಪಿಯೊಂದನ್ನು ನನಗೂ ಸಹ ಕಳುಹಿಸಿಕೊಡಿ ಎಂದು ಕೇಳಿದ್ದೆ. ಇದುವರೆಗೂ ನೋಟೀಸ್ ಕೊಟ್ಟಿಲ್ಲ. ಅವನು ಬಹುಶಃ ಯಾವಾಗಲೂ ಗಣಿ ಸಚಿವರ ಕಛೇರಿಯ ಬಳಿಯೇ ಇರುತ್ತಾನೆ. ವಿದ್ಯಾರ್ಥಿಗಳಿಗೆ ಅಲ್ಲಿ ತೊಂದರೆ ಇದೆ. ಅಲ್ಲಿ ಕಲ್ಲು ಹೊಡೆಯುತ್ತಿದ್ದಾರೆ. ರಾಮಕೃಷ್ಣ ಆಶ್ರಮದವರು ಜೀವನಹಳ್ಳಿಯಲ್ಲಿ ಅದನ್ನು ದತ್ತು ತೆಗೆದುಕೊಂಡಿದ್ದಾರೆ. ಆದರ ಬಗ್ಗೆ ಮಾನ್ಯ ನ್ಯಾಯಮೂರ್ತಿಗಳಾದ ಸಲ್ದಾನಾರವರೂ ಸಹ ಮಾನ್ಯ ಮಂತ್ರಿಗಳಿಗೆ ಪತ್ರ ಬರೆದು ಗಣಿಗಾರಿಕೆ ನಿಲ್ಲಿಸುವಂತೆ ಕೋರಿದ್ದಾರೆ. ಆ ಸ್ಥಳಕ್ಕೆ ಭೇಟಿ ನೀಡಿ ಮೂರೂವರೆ ತಿಂಗಳಾದರೂ ಕೂಡ ಗಣಿಗಾರಿಕೆ ನಿಲ್ಲಿಸುವಂತೆ ಅಲ್ಲಿ ಇಲಾಖೆ ಸಚಿವರ ಆದೇಶದಂತೆ ನೋಟೀಸ್ ನೀಡಿಲ್ಲ. ಮಾನ್ಯ ಸಚಿವರು ಭೇಟಿ ನೀಡಿದ ಮೇಲೆ ಬಹಳ ಜೋರಾಗಿ ರಾತ್ರಿ ಹಗಲೂ ಗಣಿಗಾರಿಕೆ ನಡೆಯುತ್ತಿದೆ. ಗಣಿ ಇಲಾಖೆಯಾಗಲೀ ಅಥವಾ ಅರಣ್ಯ ಇಲಾಖೆಯಾಗಲೀ ಅದನ್ನು ನಿಲ್ಲಿಸಲು ಸಾಧ್ಯವಿಲ್ಲವೇ?

ಶ್ರೀ ಪಿ. ಮುನಿಯಪ್ಪ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಆ ಬಗ್ಗೆ ನನಗೆ 2-3 ಬಾರಿ ದೂರು ಕೊಟ್ಟಾಗ ಆ ಬಗ್ಗೆ ನಾನೇ ಖುದ್ದಾಗಿ ಪರಿಶೀಲಿಸುತ್ತೇನೆ ಎಂದು ಹೇಳಿ ಅವರ ಜೊತೆಯಲ್ಲಿ ಸ್ಥಳಕ್ಕೆ ನಾನೇ ಭೇಟಿ ಕೊಟ್ಟಿದ್ದು ನಿಜ. ಆಶ್ರಮದ ಪಕ್ಕದಲ್ಲೇ ಗಣಿಗಾರಿಕೆ ನಡೆಯುತ್ತಿದ್ದ ಸ್ಥಳಕ್ಕೆ ನಾನು ಭೇಟಿ ನೀಡಿದಾಗ ತಕ್ಷಣ ಅದನ್ನು ನಿಲ್ಲಿಸುವಂತೆ ಅಂದೇ ಆದೇಶ ನೀಡಿದೆ. ಅದಾದ ನಂತರ 2-3 ದಿವಸಗಳಲ್ಲೇ ನಮ್ಮ ಅಧಿಕಾರಿಗಳು ಈ ಬಗ್ಗೆ ಸಮೀಕ್ಷೆ ಮಾಡಿ ಲೈಸೆನ್ಸ್ ಅನ್ನೂ ಕೂಡ ಕ್ಯಾನ್ಸಲ್ ಮಾಡಿದ್ದಾರೆ. ಆದರೆ ದುರಾದೃಷ್ಟವಶಾತ್ ಕೋರ್ಟಿನಿಂದ ಇದಕ್ಕೆ ತಡೆಯಾಜ್ಞೆ ತರಲಾಗಿದೆ. ಕೋರ್ಟ್‌ನಿಂದ ತಡೆಯಾಜ್ಞೆ ತಂದಿರುವುದರಿಂದ ಈ ವಿಷಯ ನಮ್ಮ ಕೈ ಮೀರಿದೆ.

ಅಧ್ಯಕ್ಷರು : ಈಗಾಗಲೇ ಈ ಪ್ರಶ್ನೆಗೆ 15 ನಿಮಿಷಗಳಿಗಿಂತ ಹೆಚ್ಚಿಗೆ ಸಮಯ ತೆಗೆದು ಕೊಳ್ಳಲಾಗಿದೆ. ಇನ್ನೂ ಹಲವಾರು ಪ್ರಶ್ನೆಗಳಿವೆ. ಅವೆಲ್ಲವನ್ನೂ ಕೂಡ ನಾನು ಮುಗಿಸಬೇಕಾಗಿದೆ. ಹೀಗಿರುವಾಗ ಎಲ್ಲಾ ಸದಸ್ಯರು ಉಪ ಪ್ರಶ್ನೆ ಕೇಳಲು ಅನುಮತಿ ಕೋರಿ ಕೈ ಎತ್ತಿದರೆ ಹೇಗೆ? ಕೊನೆಯದಾಗಿ ಮಾನ್ಯ ಅರಗ ಜ್ಞಾನೇಂದ್ರರವರಿಗೆ ಅವಕಾಶ ಕೊಡುತ್ತಿದ್ದೇನೆ.

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೇ, ಒಂದು ಸ್ಥಳದಲ್ಲಿ ಮೈನಿಂಗ್ ಮಾಡಿ ಮಿನರಲ್ಸ್ ತೆಗೆದ ನಂತರ ಆ ಜಾಗವನ್ನು ಸಮತಟ್ಟು ಮಾಡಿ ಆದರ ಮೇಲೆ ಗಿಡಗಳನ್ನು ನಡೆಬೇಕೆನ್ನುವಂತಹ ನೀತಿ ಮೊದಲಿಂದಲೂ ಕೂಡ ಇದೆ. ಆದರೆ ಇದುವರೆಗೂ ಮಾಡಿರತಕ್ಕಂಥ ಗಣಿಗಾರಿಕೆಯಲ್ಲಿ ಆ ನೀತಿಯನ್ನು ಸಂಪೂರ್ಣವಾಗಿ ಕೈ ಬಿಟ್ಟಿದ್ದಾರೆ. ಕಾಡುಗಳಲ್ಲಿ ಅಲ್ಲಲ್ಲಿ ಭಾರೀ ದೊಡ್ಡ ದೊಡ್ಡ ಹೊಂಡಗಳನ್ನು ತೆಗೆದಂತಹ ಮಣ್ಣು ಎಲ್ಲೆಲ್ಲೋ ಬಿದ್ದು ಕೊಚ್ಚಿಕೊಂಡು ಹೋಗಿ ರೈತರ ಜಮೀನುಗಳು ಮತ್ತು ಕೆರೆಗಳಿಗೆ ಹರಿದು ಬರುತ್ತಿದೆ, ಅದನ್ನು ಸರಿಪಡಿಸಲಿಕ್ಕೆ ಏನಾದರೂ ಕಾರ್ಯಕ್ರಮಗಳನ್ನು ಸರ್ಕಾರ ಮಾಡುತ್ತದೆಯೇ?

ಹಣವನ್ನು ಏನಾದರೂ ಇಲಾಖೆ ವತಿಯಿಂದ ಈ ಕಾರ್ಯಕ್ರಮಕ್ಕಾಗಿ ಇನ್‌ವೆಸ್ಟ್ ಮಾಡುತ್ತೀರಾ? ಎಂದು ಕೇಳಬಯಸುತ್ತೇನೆ. ಈಗಾಗಲೇ ವಿವಿಧ ಕಾರಣಗಳಿಗೋಸ್ಕರ ನವೀಕರಣ ಮಾಡದೇ ಇದ್ದರೂ ಕೂಡ ಬಂಡೆ ಒಡೆಯುವುದು, ಮರಳನ್ನು ತೆಗೆಯುವುದು ಇಂತಹ ಕೆಲಸಗಳೆಲ್ಲಾ ನಡೆಯುತ್ತಲೇ ಇದೆ. ಇದರಿಂದಾಗಿ ಸರ್ಕಾರಕ್ಕೆ ಬರುವಂತಹ ಆದಾಯ ನಿಂತು ಹೋಗಿದೆಯೇ ವಿನಃ ಅಧಿಕಾರಿಗಳಿಗೆ ಬರುವಂತಹ ಆದಾಯ ನಿಂತಿಲ್ಲ. ಆದರ ಬಗ್ಗೆ ಏರಿಯಾದಲ್ಲಿರತಕ್ಕಂಥ ಸಂಬಂಧಪಟ್ಟಂತಹ ಅಧಿಕಾರಿಯ ಮೇಲೆ ಜರೂರಾಗಿ ಸರ್ಕಾರ ಕ್ರಮವನ್ನು ಜರುಗಿಸುತ್ತದೆಯೇ?

ಶ್ರೀ ವಿ. ಮುನಿಯಪ್ಪ : ಮಾನ್ಯ ಅಧ್ಯಕ್ಷರೇ, ಈ ದಿಸೆಯಲ್ಲಿ ನಿರ್ದಿಷ್ಟವಾದಂತಹ ದೂರುಗಳು ಬಂದ ತಕ್ಷಣ ಖಂಡಿತ ನಾವು ಕ್ರಮ ಜರುಗಿಸುತ್ತೇವೆ. ಇದರ ಜೊತೆಗೆ ಅಕ್ರಮವಾಗಿ ಗಣಿಗಾರಿಕೆ ಮಾಡತಕ್ಕವರ ಮೇಲೆ ನಾವು ಕ್ರಮ ತೆಗೆದುಕೊಂಡಿದ್ದೇವೆ. ಇದರಿಂದಾಗಿ ಸುಮಾರು 26 ಲಕ್ಷ ರೂಪಾಯಿಗಳನ್ನು ದಂಡವಾಗಿ ನಾವು ಸಂಬಂಧಪಟ್ಟವರಿಂದ ವಸೂಲು ಮಾಡಿದ್ದೇವೆ.

ಶ್ರೀ ಸಿದ್ದನಗೌಡ್ರ ಈಶ್ವರಗೌಡ ಚಿಕ್ಕನಗೌಡ್ರ : ಮಾನ್ಯ ಅಧ್ಯಕ್ಷರೇ, ಧಾರವಾಡ ಜಿಲ್ಲಾ ಕಲಘಟಗಿ ಮತಕ್ಷೇತ್ರದಲ್ಲಿ 60-70 ಎಕರೆ ಸರ್ಕಾರದ ಅರಣ್ಯ ಇಲಾಖೆಯ ಜಾಗ ಇದೆ. ಅಲ್ಲಿ ಉಸುಕು ಮಿಶ್ರಿತ ಕಲ್ಲು ಇದೆ. ಆ ಕಲ್ಲಿನ ರೇಟ್ ಒಂದು ಲೋಡ್‌ಗೆ 750 ರೂಪಾಯಿಗಳು ಇದೆ. ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರಿಗೆ ಆದರ ಬಗ್ಗೆ ಸಾಕಷ್ಟು ಮಾಹಿತಿ ಇದೆ. 300-400 ಜನ ಅವರ ಹತ್ತಿರ ಬಂದು ಬೇಡಿಕೆಯನ್ನು ಇಟ್ಟಿದ್ದಾರೆ. ಅತಿ ಹಿಂದುಳಿದಂತಹ ಜನ, ಹರಿಜನರು-ಗಿರಿಜನರು, ಅಲ್ಪಸಂಖ್ಯಾತರು ಮತ್ತು ಸಾಕಷ್ಟು ಬಡವರು ಇರುವಂತಹ ಮತಕ್ಷೇತ್ರ ನನ್ನದಾಗಿದೆ. 1977ನೇ ಇಸವಿಯಿಂದ 1994ನೇ ಇಸವಿಯವರೆಗೆ ಅಲ್ಲಿ ಕಲ್ಲನ್ನು ತೆಗೆದಿದ್ದಾರೆ. ಇತ್ತೀಚೆಗೆ ಕೆಲವೇ ವರ್ಷಗಳ ಹಿಂದೆ ಅಂದರೆ 3-4 ವರ್ಷಗಳ ಪೂರ್ವದಲ್ಲಿ ಅಲ್ಲಿ ಕ್ವಾರಿಯನ್ನು ಬಂದ್ ಮಾಡಿದ್ದಾರೆ. ಕಾಯ್ದೆ ಅಥವಾ ಕಾನೂನಿಗೆ ಅನುಗುಣವಾಗಿ ಅಲ್ಲಿ ಆದನ್ನು ಬಂದ್ ಮಾಡಿಲ್ಲ. ಕೆಲವು ರಾಜಕೀಯ ಪ್ರಮುಖರ ಚಿತಾವಣೆಯಿಂದ ಅಲ್ಲಿ ಕಲ್ಲು ತೆಗೆಯುವ ಕೆಲಸವನ್ನು ಬಂದ್ ಮಾಡಲಾಗಿದೆ. ಈಗಾಗಲೇ 95 ಮಂದಿ ಅಲ್ಲಿ ಅರ್ಜಿಯನ್ನು ಹಾಕಿಕೊಂಡಿದ್ದಾರೆ. ಅಲ್ಲಿ ಒಂದು ಕಡ್ಡಿ ಅಥವಾ ಒಂದು ಗಿಡಾ ಸಹ ಇಲ್ಲ. ಮಾನ್ಯ ಸಚಿವರು ಅಲ್ಲಿ ದಯಮಾಡಿ ಗಣಿಗಾರಿಕೆಗೆ ಅಲ್ಲಿ ಅನುಮತಿ ನೀಡಬೇಕೆಂದು ತಮ್ಮ ಮುಖಾಂತರ ನಾನು ಕೇಳಿಕೊಳ್ಳುತ್ತೇನೆ.

ಶ್ರೀ ವಿ. ಮುನಿಯಪ್ಪ : ಈ ಬಗ್ಗೆ ಸದ್ಯಕ್ಕೆ ನನ್ನ ಬಳಿ ಮಾಹಿತಿ ಇಲ್ಲ. ಮಾನ್ಯ ಸದಸ್ಯರು ಈಗ ಪ್ರಸ್ತಾಪ ಮಾಡಿರುವ ವಿಚಾರದ ಬಗ್ಗೆ ನಾನು ವಿಚಾರ ಮಾಡಿ ಪರಿಶೀಲಿಸುತ್ತೇನೆ.

ಕೋಲಾರ ಪಟ್ಟಣದಲ್ಲಿ ಒಳಚರಂಡಿ ಕಾಮಗಾರಿ ಕುರಿತು

547 - ಶ್ರೀ ಕೆ. ಶ್ರೀನಿವಾಸ ಗೌಡ (ಕೋಲಾರ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೋಲಾರ ಪಟ್ಟಣದಲ್ಲಿ ಒಳಚರಂಡಿ ಸೌಲಭ್ಯ (ಯು.ಜಿ.ಡಿ) ಒದಗಿಸಲು ಕಾಮಗಾರಿಗಾಗಿ ಅಂದಾಜು ಪಟ್ಟಿ ತಯಾರಿಸಲಾಗಿದೆಯೆ?